**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**
**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2014**
**S.S.L.C. EXAMINATION, MARCH / APRIL, 2014**

# ಮಾದರಿ ಉತ್ತರಗಳು
# MODEL ANSWERS

ದಿನಾಂಕ : 09. 04. 2014 ಸಂಕೇತ ಸಂಖ್ಯೆ : **33-K**
Date : 09. 04. 2014 CODE NO. : **33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ
## Subject : SECOND LANGUAGE — KANNADA

[ ಪರಮಾವಧಿ ಅಂಕಗಳು : 100
[ Max. Marks : 100

| ಪ್ರಶ್ನೆ ಸಂಖ್ಯೆ | ಉತ್ತರದ ಕ್ರಮಾಕ್ಷರ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|---|
| | | ಪ್ರತಿಯೊಂದು ಸರಿ ಉತ್ತರಕ್ಕೆ ಒಂದೊಂದು ಅಂಕದಂತೆ. | 15 × 1 = 15 |
| 1. | (ಬಿ) | ಆತ್ಮ | |
| 2. | (ಎ) | ಅನುಕರಣಾವ್ಯಯ ಪದ | |
| 3. | (ಬಿ) | ತಿರುಪತಿ | |
| 4. | (ಸಿ) | ಸಫಲತೆ | |
| 5. | (ಸಿ) | ಕವಯಿತ್ರಿ | |
| 6. | (ಡಿ) | ಸಿಂಗ | |
| 7. | (ಬಿ) | ಆಶ್ಚರ್ಯಸೂಚಕ | |
| 8. | (ಬಿ) | ಜೋಡಿಪದ | |
| 9. | (ಡಿ) | ಮಾಡನು | |
| 10. | (ಬಿ) | ಅಣ್ಣಂದಿರು | |
| 11. | (ಸಿ) | ನಿಂತಿವೆ | |
| 12. | (ಡಿ) | ಬಿಡಿಸಿದಳು | |
| 13. | (ಸಿ) | ಅವರ | |
| 14. | (ಡಿ) | ಮೂಡಣ | |
| 15. | (ಸಿ) | ಛಂದಸ್ಸು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 16. | 'ಅ' ಪಟ್ಟಿಯ ವ್ಯಾಕರಣಾಂಶಗಳಿಗೆ 'ಬ' ಪಟ್ಟಿಯಲ್ಲಿಯ ಸರಿ ಉತ್ತರಗಳು : (ಪ್ರತಿ ಸರಿ ಉತ್ತರಕ್ಕೆ ಒಂದು ಅಂಕದಂತೆ ವಿತರಿಸುವುದು) | 5 × 1 = 5 |
| | i) ಋ) ಮಳೆ ಖಾಲಿ ಚೆಕ್ಕಿನ ಹಾಳೆಯಿದ್ದಂತೆ | |
| | ii) ಉ) ಹೃಷಿಕೇಶವನ್ನು | |
| | iii) ಊ) ಬೆಹನ್‌ಜಿ | |
| | iv) ಅ) ರಾಜ್ಯೋತ್ಸವ | |
| | v) ಆ) ಕ್ಷಣಕ್ಷಣ | |
| | ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬುವುದು. (ಪ್ರತಿ ಸರಿ ಉತ್ತರಕ್ಕೆ ಒಂದು ಅಂಕದಂತೆ ವಿತರಿಸುವುದು) | 5 × 1 = 5 |
| 17. | ಚಿನ್ನದ ಕೋಲನ್ನು | |
| 18. | ಪೂರ್ಣಿಮಾ | |
| 19. | ಬನಾರಸ್ | |
| 20. | ಸೂತ್ರಧಾರ | |
| 21. | ಬಡವರ | |
| | ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ. (ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 8 × 1 = 8 |
| 22. | ಕೈಲಾಸಕ್ಕೆ | |
| 23. | ಲಟ್ಟಿಸುವುದು | |
| 24. | ಸ್ತ್ರೀ ಪಾತ್ರ | |
| 25. | ರಾಷ್ಟ್ರ ಧ್ವಜವನ್ನು | |
| 26. | ಅಹಿಂಸಾ | |
| 27. | ಎದೆಯಲ್ಲಿ | |
| 28. | ಹಿರಿಯರು | |
| 29. | ಅಯೋಧ್ಯಾ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯುವುದು. | 12 × 2 = 24 |
| 30. | ಲೊಟ್ಟಿ ದೊಡ್ಡ ದೇಹದ ಗಿಡ್ಡನೆಯ ದಪ್ಪನೆಯ ಕೈಕಾಲುಗಳನ್ನು ಹೊಂದಿದ್ದ ಶಕ್ತಿವಂತೆ. ಒಂದು ಚಿಕ್ಕ ನಾಣ್ಯ ಕೈಜಾರಿ ಉರುಳ್ಕೊಂಡು ಲಾರಿ ಕೆಳಗೆ ಹೋಗಿತ್ತು. ಲೊಟ್ಟಿ ಲಾರಿಯನ್ನೇ ಪಕ್ಕಕ್ಕೆ ಸರಿಸಿ ನಾಣ್ಯವನ್ನು ತೆಗೆದುಕೊಳ್ಳುತ್ತಾಳೆ. | |
| 31. | ತಾಯಿ ಲಕ್ಷ್ಮಮ್ಮನವರು ಹಾಡುತ್ತಿದ್ದ ಸಂಪ್ರದಾಯದ ಹಾಡುಗಳು. ಮನೆಯಲ್ಲಿ ನಡೆಯುತ್ತಿದ್ದ ಭಜನೆಗಳು, ಊರಿನ ಹರಿಕಥೆ, ಯಕ್ಷಗಾನ, ಸುತ್ತಮುತ್ತಲ ಊರುಗಳ ಜಾತ್ರೆ, ಭೂತಕೋಲ, ರಥೋತ್ಸವ, ಪಾತ್ರಿಯ ದರ್ಶನ – ಇವು ಕಾರಂತರಿಗೆ ಸಿಕ್ಕ ಕಲಾ ಶ್ರೀಮಂತಿಕೆ. | |
| 32. | ತಗಡೂರು ರಾಮಚಂದ್ರರಾಯರು ತಮಗೆ ಎಂತಹ ಹೆಂಡತಿ ಬೇಕೆಂಬುದನ್ನು ಪತ್ರಿಕೆಗಳಲ್ಲಿ ಜಾಹೀರು ಮಾಡಿ, ಸರಳ ಸಮಾರಂಭದಲ್ಲಿ ಕೈಹಿಡಿದರು. ಸಂಸಾರದಲ್ಲಿದ್ದರೂ ಒಂದು ರೀತಿಯಲ್ಲಿ ಅನಾಸಕ್ತರಾಗಿದ್ದರು ಪತ್ನಿ ವಿಯೋಗವನ್ನು ಪ್ರಕೃತಿನಿಯಮವೆಂಬಂತೆ ಸಹಿಸಿಕೊಂಡಿದ್ದರು. | |
| 33. | ಲಾಲ್‌ಬಾಗಿನ ಹುಟ್ಟು ಮತ್ತು ಶೈಶವಾವಸ್ಥೆಗಳು ಇತಿಹಾಸಕಾರರ ಅವಜ್ಞೆಯಿಂದಾಗಿ ಭೂತಲೋಕದ ಗೋರಿಯಲ್ಲಿ ಹೂತುಹೋಗಿದೆ. ಪ್ರಜ್ಞಾವಂತನೂ, ಸೌಂದರ್ಯೋಪಾಸಕನೂ ಆದ ಕೆಂಪೇಗೌಡನೇ ಲಾಲ್‌ಬಾಗ್‌ಗೆ ನಾಂದಿ ಹಾಡಿರಬಹುದೆಂಬುದು ಲೇಖಕರ ಅಭಿಪ್ರಾಯ. | |
| 34. | ಗಿಡಗಳ ಸಮೃದ್ಧವಾದ ಬೆಳವಣಿಗೆಗೆ ನೀರು, ಗೊಬ್ಬರ ಮಾತ್ರ ಸಾಲವು. ಮಾನವನ ಪ್ರೀತಿಯ ವರ್ಷವೂ ಬೇಕು. | |
| 35. | ಹುಡುಗನ ತಂದೆಗೆ ಭ್ರಮೆ ಹಿಡಿದಂತಾಗಿತ್ತು. ಹಾಗಾಗಿ ಶಾಸ್ತ್ರಿಗಳ ಹೆಂಡತಿಗೆ ತಮ್ಮ ಮಗನ ಕಷ್ಟದಿದಿರು ಮೊಮ್ಮಗನ ಸುಖ ಮಸುಕಾಗಿತ್ತು. | |
| 36. | ಕುವೆಂಪುರವರ ಸಾಹಿತ್ಯ ಸಹ್ಯಾದ್ರಿಯ ಮಲೆನಾಡಿನ ಸೊಬಗಿನಂತೆ, ಬೇಂದ್ರೆಯವರ ಸಾಹಿತ್ಯ ಧಾರವಾಡ ಸೀಮೆಯ ನಿಸರ್ಗದ ಹೊಳಪಿಗೂ, ಕಾರಂತರ ಸಾಹಿತ್ಯವನ್ನು ಕಡಲ ತೀರಕ್ಕೂ, ಕೆ.ಎಸ್.ನ. ಅವರ ಸಾಹಿತ್ಯದ ಒಲವಿನ ಗೀತೆಗಳು ಮೈಸೂರಿನ ಮಲ್ಲಿಗೆ ಹಾರದ ಸೊಬಗಿಗೂ ಹೋಲಿಸಿ ವರ್ಣಿಸಿದ್ದಾರೆ. | |
| 37. | ಅಹಿಂಸಾ ತತ್ತ್ವವನ್ನು ಬೋಧಿಸಿ ಬ್ರಿಟೀಷರ ದರ್ಪವನ್ನು ಜಯಿಸಿದರು. ಭೂಮಿಯನ್ನೇ ಸ್ವರ್ಗವನ್ನಾಗಿಸಲು ಪ್ರಯತ್ನಿಸಿದರು. ನೆಲದ ನಡವಳಿಕೆಯಲ್ಲಿ ನಾಕದೌನ್ನತ್ಯವನ್ನು ತೋರಿಸಿದ್ದರಿಂದ ಗಾಂಧೀಜಿ ಪವಾಡ ಪುರುಷರು. | |
| 38. | ಯುಗಾದಿಯ ನಿರೀಕ್ಷೆಯಲ್ಲಿರುವವರು ಬಡವರು, ನಿರ್ಗತಿಕರು. ಇವರಲ್ಲಿ ಸಂತೋಷವಿಲ್ಲದೆ ಜೀವ ಕೊರಗುತ್ತಿದೆ. ತಮಗೂ ಒಂದು ಸಂತಸದ ದಿನ ಬರಬಹುದೇ ಎಂಬ ನಿರೀಕ್ಷೆಯಲ್ಲಿದ್ದಾರೆ. | |
| 39. | ಹಡಗಿನಲ್ಲಿ ನೂರಾರು ಭಾಷೆಗಳ, ವೇಷಭೂಷಣಗಳ ಜನರು ಪ್ರಯಾಣಿಸುತ್ತಾರೆ. ಈ ಹಡಗು ಮಾನವನ ಕೌಶಲ್ಯಕ್ಕೆ ಕಳಸವಿಟ್ಟಂತಿದೆ. ಆದ್ದರಿಂದ ಸಂಕ್ಷಿಪ್ತಬ್ರಹ್ಮಾಂಡ. | |
| 40. | ತಾನು ಅಮೆರಿಕಾಕ್ಕೆ ಹೋಗುವುದು ತಂದೆಗೆ ಇಷ್ಟವಿರಲಿಲ್ಲವೆಂಬುದು ಕವಿಪುತ್ರನಿಗೆ ಅರಿವಾಯಿತು. ಅಮೇರಿಕಾದಲ್ಲಿ ಗ್ರೀನ್‌ಕಾರ್ಡ್ ಸಿಕ್ಕರೂ ತಿರಸ್ಕರಿಸುತ್ತಾನೆ. ಅದರಿಂದ ತಂದೆಗೆ ಮಗ ಸಿಗುತ್ತಾನೆ. ಮಗ ಹಿರಿಯರನ್ನು ನೋಡಲು ತಿರುಪತಿಗೆ ಹೋಗಬಹುದೆಂದು ತೀರ್ಮಾನಿಸುತ್ತಾರೆ. | |
| 41. | ಭರತೇಶನು ರತ್ನ ಪುಷ್ಪಕದಲ್ಲಿ ದೇವೇಂದ್ರ ಶೋಭಿಸುವಂತೆ ಶೋಭಿಸುತ್ತಿದ್ದನು. ಉದಯಗಿರಿಯ ನೆತ್ತಿಯ ಮೇಲೆ ಮೆರೆವ ಸೂರ್ಯನಿಗೆ ಎದುರಾದ ಪ್ರತಿ ಸೂರ್ಯನಂತೆ ಕಾಣುತ್ತಿದ್ದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸಾಹಿತಿಗಳ ಸ್ಥಳ ಮತ್ತು ಕಾಲ : (ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು) | 2 × 1 = 2 |
| 42. | ದತ್ತಾತ್ರೇಯ ರಾಮಚಂದ್ರ ಬೇಂದ್ರೆ<br>ಜನ್ಮಸ್ಥಳ : ಧಾರವಾಡ<br>ಜನ್ಮ ದಿನಾಂಕ : 1896 | |
| 43. | ವಿನಾಯಕ ಕೃಷ್ಣ ಗೋಕಾಕ<br>ಜನ್ಮಸ್ಥಳ : ಸವಣೂರು<br>ಜನ್ಮ ದಿನಾಂಕ : 1909 | |
| 44. | ಪದ್ಯ ಭಾಗ ಪೂರ್ಣ ಮಾಡುವಿಕೆ :<br>ಪಂಪ ಮಹಾಚಲ ಜೋಡಿ ಶಿಖರಗಳು<br>ರನ್ನನ ಉನ್ನತ ಧವಳಗಿರಿ<br>ಶಿವಶರಣರ ವಿಸ್ತಾರದ ಬಯಲು<br>ಧುಮ್ಮಿಕ್ಕುವ ಹರಿಹರನ ಝರಿ.<br>ಅಥವಾ<br>ಕಾಲನ ದೂತರು ಕಾಲ್ಪಿಡಿದೆಳೆದಾಗ<br>ತಾಳು ತಾಳೆಂದರೆ ತಾಳುವರೆ<br>ದಾಳಿ ಬಾರದ ಮುನ್ನ ಧರ್ಮವ ಗಳಿಸಿರೋ<br>ಸುಳ್ಳು ಸಂಸಾರದ ಸುಳಿಗೆ ಸಿಕ್ಕಲು ಬೇಡಿ ‖ | 1 × 4 = 4 |
| | ಸಂದರ್ಭಸಹಿತ ವಿವರಣೆ : | 4 × 3 = 12 |
| | ಕೃತಿ-ಕರ್ತೃ | 1 ಅಂಕ |
| | ಯಾರು ಯಾರಿಗೆ | 1 ಅಂಕ |
| | ಸಂದರ್ಭ ವಿವರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 45. | *ಲೇಖಕರು* : ಹೊಯಿಸಳ (ದಿವಂಗತ ಲಕ್ಷ್ಮಣರಾಯರು)<br>*ಗದ್ಯಪಾಠ* : ಆ ದೇಶವೇ ಅವರ ತಾಯಿ<br>*ಯಾರು ಯಾರಿಗೆ* : ಭರತಕುಮಾರನು, ಸೂರ್ಯದೇವನನ್ನು ಕುರಿತು ಹೇಳುತ್ತಾನೆ.<br>*ಸಂದರ್ಭ* : ಬಾನೆಲ್ಲ ಕತ್ತಲಾದಾಗ ಈ ಮಾತನ್ನು ಭರತಕುಮಾರನು ಮೇಲಿನಂತೆ ಕೇಳುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 46. | *ಮತ್ತೆ ಬದುಕಿರಿ* : ಎಚ್.ಕೆ. ರಾಮನಾಥ<br>*ಯಾರು ಯಾರಿಗೆ* : ತೆನಾಲಿ ರಾಮಕೃಷ್ಣನು ತನ್ನ ಪತ್ನಿ ಗೌರಿಗೆ ಹೇಳಿದನು.<br>*ಸಂದರ್ಭ* : ರಾಜರಾಣಿಯರಿಂದ ನೂರು ನೂರು ವರಹಗಳನ್ನು ಪಡೆದು, ಸಂತೋಷದಿಂದ ತಿಂಡಿ ತಿನ್ನುವಾಗ ಈ ಮಾತು ಬಂದಿದೆ. | |
| 47. | *ಪದ್ಯ* : ಭಾಗ್ಯದ ಬಳೆಗಾರ<br>*ಕರ್ತೃ / ಸಂಪಾದನೆ* : ಎನ್. ಪ್ರಭಾ<br>*ಯಾರು ಯಾರಿಗೆ* : ಬಳೆಗಾರನು ಬಾಲೆಗೆ ಹೇಳಿದನು<br>*ಸಂದರ್ಭ* : ಬಾಲೆ ತನ್ನ ತವರೂರಿಗೆ ಹೋಗಿ ಹಡೆದವ್ವನಿಗೆ ಬಳೆ ತೊಡಿಸಿ ಬಾ ಎಂದಾಗ ಬಳೆಗಾರನು ಮೇಲಿನ ಮಾತನ್ನು ಹೇಳುತ್ತಾನೆ. | |
| 48. | *ಪದ್ಯ* : ಆಧುನಿಕ ವಚನಗಳು<br>*ಕರ್ತೃ* : ಪ್ರೋ ಈರಣ್ಣ ಇಟಗಿ<br>*ಯಾರು ಯಾರಿಗೆ* : ವಚನಕಾರರು ತಮ್ಮನ್ನು ಕುರಿತು ಅಹಂಕಾರ ಪಡುವ ಜನರ ವಿಚಾರವಾಗಿ ಹೇಳಿದ್ದಾನೆ.<br>*ಸಂದರ್ಭ* : ಮಾನವನ ಅವಿವೇಕಿತನವನ್ನು ಕಂಡು ಈ ಮಾತನ್ನು ಹೇಳುತ್ತಾರೆ. | |
| 49. | ಗಾದೆ ಮಾತಿನ ವಿಸ್ತರಣೆ : (ಯಾವುದಾದರೂ ಒಂದಕ್ಕೆ ಮಾತ್ರ) | 1 × 3 = 3 |
| | ಗಾದೆಯ ಮಹತ್ತ್ವ ಮತ್ತು ಅರ್ಥ | 1 ಅಂಕ |
| | ಉದಾಹರಣೆಯೊಂದಿಗೆ ಸಮರ್ಥನೆ | 2 ಅಂಕಗಳು |
| | ಒಟ್ಟು | 3 ಅಂಕಗಳು |
| 50. ಮತ್ತು 51. | ಐದಾರು ವಾಕ್ಯಗಳಿಗೆ ಮೀರದಂತೆ ಉತ್ತರಗಳು : (ಯಾವುದಾದರೂ ಎರಡಕ್ಕೆ ಮಾತ್ರ) | 2 × 4 = 8 |
| | ಮೌಲ್ಯಾಂಶಗಳಿಗೆ | 3 ಅಂಕಗಳು |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | — ರಾಮಬಾಡ ಪ್ರದೇಶವು ಗೌರಿಕುಂಡದಿಂದ ಕೇದಾರಕ್ಕೆ ಹೋಗುವ ಮಾರ್ಗದಲ್ಲಿ ಏಳು ಕಿಲೋಮೀಟರ್ ಅಂತರದಲ್ಲಿದೆ. ಅತ್ಯಂತ ಕಿರಿದಾದ ಈ ದಾರಿಯಲ್ಲಿ ಮೇಲಿನಿಂದ ಬರುವವರು, ಕೆಳಗಿನಿಂದ ಏರುವವರು, ಕುದುರೆಗಳು, ದಂಡಿ, ಕಂಡಿಯವರು ಇವರೆಲ್ಲರ ಮಧ್ಯೆ ನುಸುಳಿ ಹೋಗುವುದು ಹರಸಾಹಸ. ಸಾಧು ಸಂತರು, ಹೆಂಗಸರು, ಗಂಡಸರು, ಮಕ್ಕಳು, ಮುದುಕರು, ಯುವಕರು, ವಿದೇಶಿಯರು, ನಾನಾ ಭಾಷೆ, ವೇಷಗಳ, ವಿವಿಧ ಪ್ರಾಂತ ಮತಗಳ ಜನರು ಇಲ್ಲಿ ಬರುತ್ತಾರೆ. ಹೀಗಾಗಿ ಮಿನಿ ವಿಶ್ವವನ್ನೇ ಕಂಡಂಥ ಅನುಭವವಾಗುತ್ತದೆಂದು ಲೇಖಕಿ ಹೇಳುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಮಳೆ ನೀರು ಇಂಗಿ ಭೂಮಿಯೊಳಕ್ಕೆ ಹೋಗಿ ಅಂತರ್ಜಲವಾಗುತ್ತದೆ. ಮಣ್ಣು ಒಂದು ಸ್ಪಂಜಿನಂತೆ ಮಳೆಯ ನೀರು ಓಡದಂತೆ ತಡೆದು, ಮಣ್ಣಿನೊಳಕ್ಕೆ ಇಂಗುವಂತೆ ಮಾಡಿದರೆ ಅಂತರ್ಜಲ ಮಟ್ಟ ಹೆಚ್ಚುತ್ತದೆ. ಜಲಮೂಲದಲ್ಲೂ ನೀರು ಜಾಸ್ತಿಯಾಗುತ್ತದೆ. ಇದಕ್ಕೆ ಹೆಚ್ಚಿನ ಖರ್ಚಿನ ಅಗತ್ಯವಿಲ್ಲ. ನಮ್ಮ ನಮ್ಮ ಮನೆಯ ತಾರಸಿ ಮನೆ ಅಥವಾ ಹಂಚಿನ ಮನೆಯ ಚಾವಣಿ ಮೇಲೆ ಬೀಳೋ ನೀರನ್ನು ಇಂಗುಗುಂಡಿಯನ್ನು ತೋಡಿ ಅದರೊಳಗೆ ಬೀಳುವಂತೆ ಮಾಡಿದರೆ ಖರ್ಚಿಲ್ಲದೆ ನೀರಿನ ಸಂಗ್ರಹವಾಗುತ್ತದೆ. | |
| | — ತಗಡೂರರು ಒಳ್ಳೆಯ ವ್ಯವಸ್ಥಾಪಕರಾಗಿದ್ದರು. ಅವರ ಪ್ರಾಮಾಣಿಕತೆಯಿಂದ ಸಾರ್ವಜನಿಕರಿಂದ ಧನ ಸಹಾಯವೂ, ಕೆಲಸಗಾರರೂ ದೊರಕಿದರು. ಗ್ರಾಮಗಳ ನಿರುದ್ಯೋಗ ನಿವಾರಣೆಗೆ ಸಾಧಕವಾಯಿತು. ಮಿತವ್ಯಯ ಮತ್ತು ದಕ್ಷತೆಯಿಂದ ತಗಡೂರರು ನೇಕಾರರಿಗೂ, ನೂಲುವರಿಗೂ ಅಖಿಲ ಭಾರತ ಚರಕ ಸಂಘದ ನಿಯಮದಂತೆ ಕೂಲಿ ಕೊಟ್ಟು ಸಹ ಖಾದಿಯನ್ನು ಚರಕ ಸಂಘ ನಿಯಮಿಸಿದ ಬೆಲೆಗೆ ಮಾರುತ್ತಿದ್ದರು. ಖಾದಿ ಉತ್ತಮವೂ, ಜನಪ್ರಿಯವೂ ಆಗಿದ್ದರಿಂದ ಕೇಂದ್ರವು ಬಹುಬೇಗ ಯಶಸ್ವಿಯಾಯಿತು. | |
| 52. | ಯಾವುದಾದರೂ ಒಂದಕ್ಕೆ ಐದಾರು ವಾಕ್ಯಗಳಲ್ಲಿ ಉತ್ತರ : | 1 × 4 = 4 |
| | ವಿಷಯ ಸಂಗ್ರಹಕ್ಕೆ | 3 ಅಂಕಗಳು |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 4ಅಂಕಗಳು |
| | — ಆಧ್ಯಾತ್ಮ ಪಥದಲ್ಲಿ ಮುಂದೆ ಸಾಗಬೇಕಾದರೆ ಧ್ಯಾನವೆಂಬ ಊರುಗೋಲು ಬೇಕು. ಧ್ಯಾನವು ನಮ್ಮಲ್ಲಿ ಸತ್‌ಚಿಂತನೆಯನ್ನು ಉಂಟು ಮಾಡಿ ಮನಸ್ಸಿನಲ್ಲಿರುವ ಕೊಳೆಯನ್ನು ದೂರಮಾಡುತ್ತದೆ. ರಹಸ್ಯವಾದ ಅಂತರವಾಣಿಯನ್ನು ಆಲಿಸಲು ಧ್ಯಾನವೆಂಬ ಕಿವಿಗಳಿರಬೇಕು. ಮಾನವನಲ್ಲಿರುವ ದುರ್ಗುಣ, ದೋಷಗಳನ್ನು ಧ್ಯಾನವೆಂಬ ಅಗ್ನಿಯು ದಹಿಸಿ ನಾಶಮಾಡುತ್ತದೆ ಮತ್ತು ಸದ್ಗುಣಗಳನ್ನು ಬಿತ್ತಿ ಬೆಳೆಸುತ್ತದೆ ಎಂದು ಶಾಂತಾದೇವಿಯವರು ಹೇಳಿದ್ದಾರೆ. | |
| | — ದಾಸರು ಮಾನವ ಜನ್ಮ ದೊಡ್ಡದೆಂದು ಅದನ್ನು ಹಾಳು ಮಾಡಿಕೊಳ್ಳಬೇಡಿ ಎಂದು ಮನುಷ್ಯರಿಗೆ ಎಚ್ಚರಿಗೆ ನೀಡಿದ್ದಾರೆ. ಕಣ್ಣು, ಕೈ, ಕಾಲು, ಕಿವಿ, ನಾಲಿಗೆ ಗಟ್ಟಿಯಾಗಿ ಇರುವಾಗ ಹೆಣ್ಣು, ಮಣ್ಣಿನ ಆಸೆಯಿಂದ ಹರಿನಾಮ ಸ್ಮರಣೆ ಮಾಡದೆ ತಪ್ಪು ಮಾಡಬೇಡಿ. ಕಾಲನದೂತರು ಕಾಲನ್ನು ಎಳೆವಾಗ ನಿಮ್ಮನ್ನು ನಿಮ್ಮ ಧನ, ಧಾನ್ಯ ಸತಿ-ಸುತರು ಕಾಯುವುದಿಲ್ಲ. ಸುಳ್ಳು ಸಂಸಾರದಲ್ಲಿ ಸಿಕ್ಕಬೇಡಿ. ಇನ್ನಾದರೂ ಏಕೋಭಾವದಿಂದ ಶ್ರೀಪುರಂದರ ವಿಠಲರಾಯನನ್ನು ಪೂಜಿಸಿರೆಂದು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 53. | ಪತ್ರ ಲೇಖನ (ಒಂದಕ್ಕೆ ಮಾತ್ರ) : | 1 × 5 = 5 |
| | ಅರ್ಜಿ ಲೇಖನ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ, ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | ತಂದೆಯವರಿಗೆ ಪತ್ರ : ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| 54. | ಪ್ರಬಂಧ ಲೇಖನ (ಒಂದಕ್ಕೆ ಮಾತ್ರ) | 1 × 5 = 5 |
| | ಪೀಠಿಕೆ/ಪ್ರಸ್ತಾವನೆ | 1 ಅಂಕ |
| | ವಿಷಯದ ಜೋಡಣೆ | 2 ಅಂಕಗಳು |
| | ಮುಕ್ತಾಯ /ಉಪಸಂಹಾರ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |